ಅನುಬಂಧ 'ಎ'

ಕ್ರಮ ಸಂಖ್ಯೆ	ಜಿಲ್ಲೆಗಳ ಹೆಸರು	ಯೋಜನೇತರ	ಕಪ್ಪು ಹಲಗೆ ಯೋಜನೆ	
			1 ಹಂತ	2 ಹಂತ
1	2	3	4	5
1	ಬೆಂಗಳೂರು ಉತ್ತರ	038	—	32
2	ಬೆಂಗಳೂರು ದಕ್ಷಿಣ	085	105	89
3	ಬೆಂಗಳೂರು ಗ್ರಾಮಾಂತರ	409	—	282
4	ಕೋಲಾರ	518	230	175
5	ತುಮಕೂರು	265	—	274
6	ಚಿತ್ರದುರ್ಗ	175	—	193
7	ಶಿವಮೊಗ್ಗ	220	—	264
8	ಮೈಸೂರು	131	878	—
9	ಮಂಡ್ಯ	483	—	203
10	ದಕ್ಷಿಣ ಕನ್ನಡ	219	—	—
11	ಚಿಕ್ಕಮಗಳೂರು	100	100	207
12	ಕೊಡಗು	118	—	19
13	ಹಾಸನ	288	—	—
14	ಧಾರವಾಡ	388	—	47
15	ಬೆಳಗಾಂ	528	—	73
16	ಬಿಜಾಪುರ	394	—	19
17	ಉತ್ತರ ಕನ್ನಡ	92	—	76
18	ಗುಲ್ಬರ್ಗಾ	101	—	382
19	ರಾಯಚೂರು	063	—	220
20	ಬೀದರ್	062	—	52
21	ಬಳ್ಳಾರಿ	140	149	105
	ಒಟ್ಟು :	4817	1462	2712

ವಿಷಯ :– ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಹೊಂದಿರುವ ಕ್ವಾಟ್ರರ್ಸ್‌ಗಳ ಸಂಖ್ಯೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 614 (941)

ಶ್ರೀ ರಾಮಲಿಂಗ ರೆಡ್ಡಿ (ಜಯನಗರ) :– ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಹೊಂದಿರುವ ವಸತಿಗೃಹ (ಕ್ವಾಟ್ರರ್ಸ್)ಗಳ ಸಂಖ್ಯೆ ಎಷ್ಟು ಹಾಗೂ ಅವು ಎಲ್ಲೆಲ್ಲಿವೆ (ನಿವಾಸಿಗಳ ಹೆಸರು, ವಿಳಾಸ ಮುಂತಾದ ಪೂರ್ಣ ವಿವರಗಳನ್ನು ನೀಡುವುದು)

ಆ) ಸದರಿ ವಸತಿ ಗೃಹಗಳಲ್ಲಿ ವಾಸವಾಗಿರುವವರ ಪೈಕಿ ಸ್ವಂತ ಮನೆ ಇರುವವರ ಸಂಖ್ಯೆ ಎಷ್ಟು ? (ಪೂರ್ಣ ವಿವರಗಳನ್ನು ನೀಡುವುದು)

ಇ) ಸ್ವಂತ ಮನೆಗಳನ್ನು ಬಾಡಿಗೆಗೆ ನೀಡಿ ಇನ್ನೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರ ಪಾಗೂ ಲೋಕೋಪಯೋಗಿ ಇಲಾಖೆಯ ವಸತಿಗೃಹದಲ್ಲಿ ಮುಂದುವರೆಯುತ್ತಿರುವ ಕಾರಣಗಳೇನು ಪಾಗೂ ಅಂತಹವರ ವಿರುದ್ಧ ಸರ್ಕಾರವವರು ಕೈಗೊಳ್ಳುವ ಕ್ರಮಗಳೇನು ?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) :–

ಅ) ವಸತಿಗೃಹಗಳ ಸಂಖ್ಯೆ 06 ಹಾಗೂ ಅವುಗಳು ಆಸ್ಟಿನ್ ಬಡಾವಣೆಯಲ್ಲಿರುತ್ತವೆ, ನಿವಾಸಿಗಳ ಹೆಸರು ವಿಳಾಸ ಈ ಕೆಳಕಂಡಂತಿರುತ್ತವೆ.

1) ಶ್ರೀ ಎ. ಕೆ. ಕರಪ್ಪನವರ್, ಉಪಕಾರ್ಯದರ್ಶಿ–1 ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು–20.

2) ಶ್ರೀ ರಬೀಂದ್ರ, ವಿಶೇಷ ಭೂಸ್ವಾಧೀನಾಧಿಕಾರಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು–20.

3) ಶ್ರೀ ಎಂ.ಎನ್. ನರೇಂದ್ರರಾಜ ಅರಸ್, ಉಪ–ಆಯುಕ್ತರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಬೆಂಗಳೂರು–20.

4) ಶ್ರೀ ಮಹಮದ್ ಅಲಿ, ಮೇಲ್ವಿಚಾರಕರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಬೆಂಗಳೂರು–20

5) ಶ್ರೀ ಜಯಕಾಂತ್ ಕೆ. ಮೇಲ್ವಿಚಾರಕರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು–20

6) ಶ್ರೀ ವೆಂಕಟರಮಣಪ್ಪ, ಉಪನಿರ್ದೇಶಕರು, ನಗರ ಯೋಜನಾ ವಿಭಾಗ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು–20.

ಆ) ಸದರಿ ವಸತಿ ಗೃಹಗಳಲ್ಲಿ ವಾಸವಾಗಿರುವವರ ಪೈಕಿ ಯಾರಿಗೂ ಸ್ವಂತ ಮನೆ ಇರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ವಿಷಯ :– ಶಿವಮೊಗ್ಗ ನೀರು ಸರಬರಾಜು ಯೋಜನೆ.

ಚುಕ್ಕೆ ಗುರ್ತಿಲ್ಲದ ಪ್ರಶ್ನೆ ಸಂಖ್ಯೆ 616 (915)

ಶ್ರೀ ಕೆ. ಎಸ್. ಈಶ್ವರಪ್ಪ (ಶಿವಮೊಗ್ಗ) :– ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

1) ಶಿವಮೊಗ್ಗ ನೀರು ಸರಬರಾಜು ಯೋಜನೆಯನ್ನು ಹಿಂದಿನ ಮುಖ್ಯಮಂತ್ರಿಗಳು ಅಡಿಗಲ್ಲು ಸಮಾರಂಭ ನಡೆಸಿಕೊಟ್ಟಿದ್ದು ಕಾರ್ಯ ಇನ್ನೂ ಪ್ರಾರಂಭವಾಗಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2) ಸದರಿ ಕೆಲಸ ಯಾವಾಗ ಪ್ರಾರಂಭವಾಗುತ್ತದೆ ಹಾಗೂ ಯೋಜನೆ ಪೂರ್ಣವಾಗಲು ಬೇಕಾಗುವ ಹಣ ಎಷ್ಟು ?

3) ಸದರಿ ಯೋಜನೆ ಪೂರ್ಣಗೊಳ್ಳಲು ಬೇಕಾಗುವ ಸಮಯವೆಷ್ಟು ?

ಶ್ರೀ ಕೆ. ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) :–

1) ಹೌದು.

2) ಈ ಯೋಜನೆಯ ಕೆಲಸವನ್ನು ಜನವರಿ 1991 ರಿಂದ ಪ್ರಾರಂಭಿಸಲಾಗುವುದು. ಈ ಯೋಜನೆಗೆ ರೂ. 500 ಲಕ್ಷ ಬೇಕಾಗುತ್ತದೆ.

3) ಈ ಯೋಜನೆ ಪ್ರಾರಂಭಿಸಿದಂದಿನಿಂದ ಮೂರು ವರ್ಷಗಳಲ್ಲಿ ಪೂರ್ಣಗೊಳಿಸಲಾಗುವುದು.

ವಿಷಯ :– ಶಿವಮೊಗ್ಗದ ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್.

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ 617 (913)

ಶ್ರೀ ಕೆ. ಎಸ್. ಈಶ್ವರಪ್ಪ (ಶಿವಮೊಗ್ಗ) :– ಮಾನ್ಯ ಶಿಕ್ಷಣ ಮತ್ತು ಸಂಸದೀಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಶಿವಮೊಗ್ಗಕ್ಕೆ ವಿಶ್ವ ಆನುದಾನ ಯೋಜನೆಯಿಂದ ಹಣ ಮಂಜೂರು ಆಗಿದೆಯೇ ?